30-11-2011

# “ನಮ್ಮ ಗ್ರಾಮದ ಜೀವವೈವಿಧ್ಯತೆ” ಸ್ಪರ್ಧೆ ಸಂಪನ್ನ

ಕುಮಟಾ: ಉತ್ತರ ಕನ್ನಡ ಜಿಲ್ಲೆಯ ಪ್ರೌಢಶಾಲೆ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗಾಗಿ ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರುರವರ ಜೀವಪರಿಸರ ವಿಜ್ಞಾನ ಕೇಂದ್ರವು ಆಯೋಜಿಸಿದ “ನಮ್ಮ ಗ್ರಾಮದ ಜೀವವೈವಿಧ್ಯತೆ” ಸ್ಪರ್ಧೆಗೆಯನ್ನು (ಕಾರವಾರ ಶೈಕ್ಷಣಿಕ ಜಿಲ್ಲೆ) ಇಲ್ಲಿನ ಹೋಟೆಲ್ ವೈಭವ ಪ್ಯಾಲೇಸ್‌ನ ಸಭಾಂಗಣದಲ್ಲಿ ಅರಣ್ಯ ಇಲಾಖೆಯ ಹೊನ್ನಾವರ ವಿಭಾಗದ ಉಪರಣ್ಯ ಸಂರಕ್ಷಣಾಧಿಕಾರಿ ಕೃಷ್ಣಾ. ಡಿ. ಉದುಪುಡಿ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಅವರು ಮಾತನಾಡಿ, ಸ್ವಚ್ಛ ಹಾಗೂ ಉತ್ತಮವಾದ ಪರಿಸರವನ್ನು ಹೊಂದಿದ ದೇಶ ಮುಂದಿನ ದಿನಗಳಲ್ಲಿ ಜಗತ್ತಿನಲ್ಲಿಯೇ ಒಂದು ಶ್ರೀಮಂತ ದೇಶ ಎಂದು ಕರೆಸಿಕೊಳ್ಳುವುದರಲ್ಲಿ ಯಾವುದೇ ಸಂದೇಹವಿಲ್ಲ. ಗ್ರಾಮಗಳಲ್ಲಿರುವ ಜೀವವೈವಿಧ್ಯತೆಗಳನ್ನು ಜಗತ್ತಿನ ಯಾವ ದೇಶವು ಈವರೆಗೆ ಸರಿಯಾಗಿ ದಾಖಲಿಸಿಕೊಂಡಿದ್ದಿಲ್ಲ. ಆದರೆ ನಮ್ಮ ದೇಶದಲ್ಲಿ ಮಾತ್ರ ಈ ಕಾರ್ಯ ನಡೆದಿದೆ. ಅದರಲ್ಲೂ ಶಾಲಾ ವಿದ್ಯಾರ್ಥಿಗಳ ಮೂಲಕ ಈ ಕಾರ್ಯ ನಡೆದಿರುವುದರು ಜಗತ್ತಿನಲ್ಲೇ ಪ್ರಥಮ ಎನಿಸುವ ಕಾರ್ಯವಾಗಿದೆ. ಜಿಲ್ಲೆಯಲ್ಲಿರುವ ಪ್ರತಿಯೊಂದು ಗ್ರಾಮಗಳಲ್ಲಿರುವ ಜೀವವೈವಿಧ್ಯತೆಯನ್ನು ವಿದ್ಯಾರ್ಥಿಗಳು ದಾಖಲಿಸಿ ವರದಿ ತಯಾರಿಸುವುದರಿಂದ ಈ ಜಿಲ್ಲೆಯನ್ನು ಯಾವ ರೀತಿಯಲ್ಲಿ ಅಭಿವೃದ್ಧಿಪಡಿಸಲು ಸಾಧ್ಯ ಎಂಬುದರ ಕುರಿತು ಸರಕಾರದಲ್ಲಿದ್ದ ಯೋಜನೆಗಳನ್ನು ರೂಪಿಸಲು ಸಹಾಯವಾಗುತ್ತದೆ ಎಂದು ಉದುಪುಡಿ ಹೇಳುತ್ತ, ವಿದ್ಯಾರ್ಥಿಗ ಈ ಕಾರ್ಯವನ್ನು ಅವರು ಈ ಸಂದರ್ಭದಲ್ಲಿ ಶ್ಲಾಘಿಸಿದರು.

ಪರಿಸರ ವಿಜ್ಞಾನ ಸಂಸ್ಥೆಯ, ಕುಮಟಾ ಕೇಂದ್ರದ ಮುಖ್ಯಸ್ಥ ಡಾ. ಎಂ.ಡಿ. ಸುಭಾಸಚಂದ್ರನ್ ಈ ಸಂದರ್ಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿ, ಉತ್ತರ ಕನ್ನಡ ಜಿಲ್ಲೆಯ ಧಾರಣಾ ಸಾಮರ್ಥ್ಯ ಯಾವ ಮಟ್ಟದಲ್ಲಿದೆ ಎಂಬುದನ್ನು ಸೂಚಿಸುವುದಕ್ಕಾಗಿ ಜಿಲ್ಲೆಯ ಪ್ರತಿಯೊಂದು ಗ್ರಾಮಗಳಲ್ಲಿನ ಜೀವವೈವಿಧ್ಯತೆಗಳನ್ನು ದಾಖಲಿಸುವ ಕಾರ್ಯವನ್ನು ನಡೆಸಿ ಆದರ ಮೂಲಕ ಸರಕಾರಕ್ಕೆ ವರದಿಯನ್ನು ತಯಾರಿಸಿ ಕೊಡಬೇಕಾಗಿದೆ. ಈ ವರದಿಯನ್ವಯ ಸರಕಾರಕ್ಕೆ ಈ ಜಿಲ್ಲೆಯನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಯಾವ ರೀತಿಯದ್ದಾದ ಯೋಜನೆಗಳನ್ನು ಇಲ್ಲಿ ಅನುಷ್ಠಾನಗೊಳಿಸಬಹುದು ಎಂಬುದರ ಕುರಿತು ತಿರ್ಮಾನಕೈಗೊಳ್ಳಲು ಸಾಧ್ಯವಾಗುತ್ತದೆ. ಈ ಕಾರ್ಯವನ್ನು ನಮ್ಮ ಸಂಸ್ಥೆಯೇ ಮಾಡಿದ್ದರೆ ಪ್ರತಿಯೊಂದು ಗ್ರಾಮಗಳಲ್ಲಿರುವ ವೈವಿಧ್ಯತೆಗಳನ್ನು ಧಾಖಲಿಸಲು 30 ವರ್ಷ ಬೇಕಾಗುತ್ತಿತ್ತು. ಆದರೆ ಈ ಕಾರ್ಯವನ್ನು ನಡೆಸಲು ವಿದ್ಯಾರ್ಥಿಗಳಿಗೆ ಅವಕಾಶ ನೀಡಿದ್ದರಿಂದ ಈ ದಾಖಲಾತಿ ಕಾರ್ಯ ಕೆಲವೆ ತಿಂಗಳಲ್ಲಿ ಮುಗಿಯಲು ಕಾರಣವಾಗಿದೆ ಎಂದು ಹೇಳಿದರು.




ಜಿಲ್ಲೆಯ ಪ್ರತಿಯೊಂದು ಗ್ರಾಮಗಳಲ್ಲಿನ ಜೀವವೈವಿಧ್ಯತೆಯನ್ನು ದಾಖಲಿಸುವುದಕ್ಕಾಗಿ ಸಮಿತಿಯನ್ನು ನಮ್ಮ ಸಂಸ್ಥೆ ರಚಿಸಿತ್ತು. ಆದರೆ ಈ ಸಮಿತಿಯವರು ಸರಿಯಾಗಿ ಕಾರ್ಯ ನಡೆಸದಿರುವುದರ ಕುರಿತು ಬೇಸರ ವ್ಯಕ್ತಪಡಿಸಿದ ಡಾ. ಸುಭಾಚಂದ್ರನ್, ನಮ್ಮ ಸುತ್ತಲಿರುವ ವಿವಿಧ ಪರಿಸರ ಸಂಪತ್ತಿನ ಕುರಿತು ನಮ್ಮವರಿಗೆ ಮಾಹಿತಿ ಇಲ್ಲದಿರುವುದರಿಂದ ಸಸ್ಯದಿಂದ ಕ್ರಿಮಿನಾಶಕವನ್ನು ತಯಾರಿಸಬಹುದು ಎಂಬುದು ನಮ್ಮವರಿಗೆ ಗೊತ್ತಿಲ್ಲದಂತ ಪರಿಸ್ಥಿತಿ ನಿರ್ಮಾಣವಾಗಿದೆ. ಒಂದೊಮ್ಮೆ ಕೀಟನಾಶಕವನ್ನು ಇಂತಹ ಸಸ್ಯದಿಂದ ತಯಾರಿಸಬಹುದು ಎಂಬುದು ಗೊತ್ತಾದರೆ ಅದನ್ನು ತಯಾರಿಸುವುದಕ್ಕಾಗಿ ನಾವು ವಿದೇಶಿ ಕಂಪನಿಯಿಂದ ಪರವಾನಿಗೆ ಪಡೆದುಕೊಳ್ಳಬೇಕಾದ ಪರಿಸ್ಥಿತಿಯನ್ನು ನಾವು ತಂದುಕೊಂಡಿದ್ದೇವೆ. ಇದಕ್ಕೆ ನಮ್ಮ ಅಜ್ಞಾನವೆ ಕಾರಣವಾಗಿದೆ. ಈ ಜಿಲ್ಲೆ ಎಲ್ಲ ರೀತಿಯಿಂದಲೂ ಸಂಪತ್ತಭರಿತವಾದ ಜಿಲ್ಲೆಯಾಗಿದ್ದು, ಈ ಜಿಲ್ಲೆಯಲ್ಲಿ ಹೊಟ್ಟೆಗೆ ಇಲ್ಲದೆ ಸತ್ತವರು ಯಾರು ಇಲ್ಲ. ಹಾಗಾಗೀ ನಮ್ಮಲ್ಲಿರುವ ಸಂಪತ್ತನ್ನು ಸದುಪಯೋಗಪಡಿಸಿಕೊಳ್ಳುವುದಕ್ಕಾಗಿ ವಿದೇಶಿ ಕಂಪನಿಗಳಿಂದ ಪರವಾನಿಗೆ ಪಡೆದುಕೊಳ್ಳುವುದನ್ನು ನಿಲ್ಲಿಸುವುದಕ್ಕಾಗಿ ಈಗ ನಮ್ಮ ಗ್ರಾಮದಲ್ಲಿರುವ ಜೀವವೈವಿಧ್ಯತೆಗಳನ್ನು ದಾಖಲಿಸಿಕೊಳ್ಳೋಣ ಎಂದು ಹೇಳಿದರು. ವೇದಿಕೆಯಲ್ಲಿ ಮುಖ್ಯ ಅತಿಥಿಗಾಳಾಗಿ ಪಾಲ್ಗೊಂಡಿದ್ದ ಸಸ್ಯತಜ್ಞ ಜಿ.ಆರ್.ರಾವ್ ಮಾತನಾಡಿದ್ದರು.

ಡಾ.ಪ್ರಕಾಶ ಮೇಸ್ತ ಸ್ವಾಗತಿಸಿದ್ದರು. ಸಸ್ಯತಜ್ಞ ಜಿ.ಆರ್.ರಾವ್, ಕೀಟತಜ್ಞ ಬಾಲಚಂದ್ರ, ಅರಣ್ಯಸಸ್ಯಗಳ ವಿಶಿಷ್ಟ ಜ್ಞಾನ ಹೊಂದಿರುವ ವಿಷ್ಣು ಡಿ. ಮುಕ್ರಿ, ಪಕ್ಷಿ ಹಾಗೂ ಮೃದ್ವಂಗಿಗಳ ಅಭ್ಯಾಸ ನಡೆಸುತ್ತಿರುವ ಶ್ರೀಕಾಂತ ನಾಯ್ಕ ಹಾಗೂ ಭೂಮಿನಾಥನ್ ರವಗಳು ವಿಷಯ ತಜ್ಞರಾಗಿ ಉಪಸ್ಥಿತರಿದ್ದರು ಈ ಕಾರ್ಯಕ್ರಮದಲ್ಲಿ ಕಾರವಾರ ಶೈಕ್ಷಣಿಕ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಕುಮಟಾ, ಅಂಕೋಲಾ ಹಾಗೂ ಕಾರವಾರ ತಾಲೂಕಿನಿಂದ ಆಗಮಿಸಿದ್ದ 10 ಪ್ರೌಢ ಶಾಲೆಗಳ 20 ವಿದ್ಯಾರ್ಥಿ-ವಿದ್ಯಾರ್ಥಿನಿಯವರು ತಮ್ಮ ತಮ್ಮ “ನಮ್ಮ ಗ್ರಾಮದ ಜೀವವೈವಿಧ್ಯತೆ” ಯ ವೈಜ್ಞಾನಿಕ ವರದಿಗಳನ್ನು ಮಂಡಿಸಿದರಲ್ಲದೆ, ತಮ್ಮ ಗ್ರಾಮಗಳ ಸಸ್ಯ ವೈವಿಧ್ಯತೆಗಳು, ಔಷಧಿ ಸಸ್ಯಗಳು, ಪಾರಂಪರಿಕ ವ್ಯವಸಾಯ-ತೋಟಗಾರಿಕಾ ಬೆಳೆಗಳು ಮತ್ತು ಅವುಗಳ ತಳಿಗಳು, ಬೆಳೆಗಳ ವಿಶೇಶ ಗುಣಗಳು, ಜೈವಿಕ ಕೃಷೀ, ಸಹಕಾರ, ಪ್ರಾಣಿ ವೈವಿಧ್ಯತೆ, ಪಶುಸಂಗೋಪನೆ, ಜೇನು ಸಾಕಾಣಿಕೆ, ಸ್ಥಳಿಯ ಜನರ ಜ್ಞಾನ ವೈವಿಧ್ಯತೆ, ಮೀನುಗಾರಿಕೆ, ಗ್ರಾಮದ ದೇವರಕಾಡು ಹಾಗೂ ದೇವರಬನಗಳ ಬಗ್ಗೆ ಪರಿಚಯಿಸಿದರು. ನಾಳೆ(ನ.30) ರಂದು ಹೊನ್ನವರ ಹಾಗೂ ಭಟ್ಕಳ ತಾಲೂಕಿನಿಂದ ಆಗಮಿಸುವ ವಿದ್ಯಾರ್ಥಿ-ವಿದ್ಯಾರ್ಥಿನಿಯರು ತಮ್ಮ ಭಾಗದಲ್ಲಿರುವ ಜೀವವೈವಿಧ್ಯತೆಯ ಕುರಿತಾದ ವೈಜ್ಞಾನಿಕ ವರದಿಯನ್ನು ಇಲ್ಲಿ ಪ್ರಸ್ತುತಪಡೆಸಲಿದ್ದಾರೆ.

The Hindu, 24-11-2011 (P)

# Students' conference on village biodiversity

Correspondent

**SIRSI:** A three-day students' conference on biodiversity called "Namma Grama Jeeva Vaividhya" (biodiversity of my village) will be held at Hotel Madhuvana here. It will begin on Thursday under the auspices of the Centre of Ecological Science, Indian Institute of Science, Kumta, and under the guidance of scientist T.V. Ramachandran.

Students from 45 educational institutions from 114 villages of Uttara Kannada have documented on biodiversity from their respective villages. The students of Sirsi, Siddapur, and Mundgod taluks will present their reports on the occasion.

On December 2, the students from Yellapur taluk will make presentations. This will be arranged at Hotel Vaibhav, Kumta..

ಮುಖ್ಯ ಅತಿಥಿಗಳಾಗಿ

ಜನಮಾಧ್ಯಮ, 24-11-2011 (P3)

# ನಮ್ಮ ಗ್ರಾಮದ ಜೀವವೈವಿಧ್ಯತೆ ದಾಖಲಾತಿಯ ಮಕ್ಕಳ ಸಮ್ಮೇಳನ

ಶಿರಸಿ,ನ.23:ಉತ್ತರ ಕನ್ನಡ ಜಿಲ್ಲೆಯ ಪ್ರೌಢಶಾಲೆ ಹಾಗೂ ಕಾಲೇಜು ವಿದ್ಯಾರ್ಥಿ/ನಿಯರಿಗಾಗಿ ಭಾರತೀಯ ವಿಜ್ಞಾನ ಸಂಸ್ಥೆ ಬೆಂಗಳೂರುರವರ ಜೀವಪರಿಸರ ವಿಜ್ಞಾನ ಕೇಂದ್ರವು ಕರ್ನಾಟಕ ಸರಕಾರದ ಪಶ್ಚಿಮ ಘಟ್ಟ ಕಾರ್ಯಪಡೆ ಹಾಗೂ ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸಹಯೋಗದೊಂದಿಗೆ "ನಮ್ಮ ಗ್ರಾಮದ ಜೀವವೈವಿಧ್ಯತೆ" ಎಂಬ ವಿಷಯದ ಬಗ್ಗೆ ಸ್ಪರ್ಧೆಯನ್ನು ಜಿಲ್ಲಾ ಮಟ್ಟದಲ್ಲಿ ಆಯೋಜಿಸಿ. ಉತ್ತಮವಾಗಿ ವೈಜ್ಞಾನಿಕ ವರದಿ ಮಂಡಿಸುವರಿಗೆ ಶಿರಸಿಯಲ್ಲಿ ನಡೆಯುವ "ಉತ್ತರ ಕನ್ನಡ ಜಿಲ್ಲೆಯ ಜೀವವೈವಿಧ್ಯತೆ" ಕಾರ್ಯಾಗಾರದಲ್ಲಿ "ಯುವ ಸಹ್ಯಾದ್ರಿ ಜೀವವಿಜ್ಞಾನಿ-2011 ಪ್ರಶಸ್ತಿ ನೀಡಲು ಶಾಲಾ-ಕಾಲೇಜು ವಿದ್ಯಾರ್ಥಿಗಳ ಹೆಸರನ್ನು ಆಯಾ ಪ್ರೌಢಶಾಲೆ ಹಾಗೂ ಕಾಲೇಜುಗಳು ಮೂಲಕ ನೊಂದಾಯಿಸಿ ವೈಜ್ಞಾನಿಕ ವರದಿ ಮಂಡಿಸಲು ಪೂರ್ವ ತಯಾರಿ ನಡೆಸಲು ಪ್ರಕಟಣೆ ನೀಡಿತ್ತು. ಇದಕ್ಕೆ ಜಿಲ್ಲೆಯ ವಿವಿಧ ತಾಲೂಕಿನ 131 ಗ್ರಾಮಗಳ ಜೀವವೈವಿಧ್ಯತೆಯನ್ನು 50 ಶಾಲಾ/ಕಾಲೇಜುಗಳ 195 ವಿದ್ಯಾರ್ಥಿ/ನಿಯರು ತಮ್ಮ ಮಾರ್ಗದರ್ಶಕ ಶಿಕ್ಷಕರ ಮೂಲಕ ವರದಿಯನ್ನು ಸಲ್ಲಿಸಿರುತ್ತಾರೆ.

# ಕೆನರಾ ಸಾರಸ್ವತ ಸೌಹಾರ್ದ ಸಹಕಾರಿಗೆ ಉತ್ತಮ ಸಹಕಾರಿ ಪ್ರಶಸ್ತಿ

ಕುಮಟಾ,ನ.23 : ಶಿರಸಿಯಲ್ಲಿ ಜರುಗಿದ ಅಖಿಲ ಭಾರತ ಸಹಕಾರಿ ಸಪ್ತಾಹ ಅಂಗವಾಗಿ ಸುಲಭ ಸಾಲ ಹಾಗೂ ಇತರೆ ಆರ್ಥಿಕ ಸೇವಾ ದಿನಾಚರಣೆಯ ಸಂದರ್ಭದಲ್ಲಿ ಸಹಕಾರಿಯ ಪ್ರಗತಿ ಹಾಗೂ ಸೇವೆಯನ್ನು ಗುರುತಿಸಿ ಇಲ್ಲಿನ ಕೆನರಾ ಸಾರಸ್ವತ ಕ್ರೆಡಿಟ್ ಸೌಹಾರ್ದ ಸಹಕಾರಿ ಜಿಲ್ಲೆಯ ಉತ್ತಮ ಸಹಕಾರಿ ಎಂದು ಪ್ರಶಸ್ತಿ ನೀಡಲಾಗಿದೆ.

ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷ ರಮೇಶ ಮಂಜುನಾಥ ಭಟ್ಟ ಹಾಗೂ ಕಾರ್ಯದರ್ಶಿ ಸುನೀಲ ಬಾಳಗಿ ಇವರನ್ನು ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ ಹಾಗೂ ರಾಜ್ಯ ಮಹಾಮಂಡಳಿಯ ಅಧ್ಯಕ್ಷ ಎಚ್ ಕೆ ಪಾಟೀಲ ಇವರುಗಳು ಸನ್ಮಾನಿಸಿ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಈ ಸಂದರ್ಭದಲ್ಲಿ ಸಹಕಾರಿಯ ನಿರ್ದೇಶಕ ನಾರಾಯಣ ರಾಮದಾಸ ಶಾನಭಾಗ, ಸುಧಾಕರ ವಿಠೋಬನಾಯಕ ಉಪಸ್ಥಿತರಿದ್ದರು..

ಈ ಸಂದರ್ಭದಲ್ಲಿ ಸಮಾಜದ ಬಾಂಧವರಿಗೆ ಎಲ್ಲ ಗ್ರಾಹಕರಿಗೆ, ಪ್ರಸಕ್ತ ಹಾಗೂ ಹಿಂದಿನ ನಿರ್ದೇಶಕ ಮಂಡಳಿ, ಸಿಬ್ಬಂದಿ ವರ್ಗ, ಪಿಗ್ಮಿ ಸಂಗ್ರಹಕರಿಗೆ ಈ ಶ್ರೇಯಸ್ಸು ತಲುಪುತ್ತದೆ ಎಂದು ಅಭಿನಂದಿಸಿರುತ್ತಾರೆ.

ಜನಾಂತರಂಗ 30-11-2011

ಕನ್ನಡ ಜನಾಂತರಂಗ – 30-11-2011

# ‘ವಿದ್ಯಾರ್ಥಿಗಳ ಮೂಲಕ ಜೀವವೈವಿಧ್ಯತೆ ದಾಖಲಾತಿ ಅತ್ಯುಪಯುಕ್ತ ಕಾರ್ಯಕ್ರಮ’

## ಉದಪುಡಿ ಮೆಚ್ಚುಗೆ

ಕುಮಟಾ ಬ್ಯೂರೋ ವರದಿ

ಕುಮಟಾ: ಪ್ರೌಡಶಾಲೆ ವಿದ್ಯಾರ್ಥಿ- ವಿದ್ಯಾರ್ಥಿನಿಯರಿಗಾಗಿ ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು, ಜೀವಪರಿಸರ ವಿಜ್ಞಾನ ಕೇಂದ್ರ ಆಯೋಜಿಸಿದ ‘ನಮ್ಮ ಗ್ರಾಮದ ಜೀವವೈವಿಧ್ಯತೆ’ ಸ್ಪರ್ಧೆಯನ್ನು ಮಂಗಳವಾರ ವೈಭವ ಹೊಟೇಲ್‌ನಲ್ಲಿ ನಡೆದ ಕಾರ್ಯಕ್ರಮವನ್ನು ಉಪರಣ್ಯ ಸಂರಕ್ಷಣಾಧಿಕಾರಿ ಕೃಷ್ಣ ಡಿ ಉದುಮಡಿ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಸುಂದರ ಪರಿಸರ ಹಾಗೂ ಸ್ವಚ್ಛತೆಯಿಂದ ಕೂಡಿರುವ ದೇಶಗಳು ಶ್ರೀಮಂತ ದೇಶವಾಗುವುದರಲ್ಲಿ ಯಾವುದೆ ಸಂದೇಹವಿಲ್ಲ ಪರಿಸರದಲ್ಲಿರುವ ಜೀವವೈವಿಧ್ಯತೆಗಳನ್ನು ಜಗತ್ತಿನ ಯಾವ ದೇಶವು ಸರಿಯಾಗಿ ದಾಖಲಿಸಿಕೊಂಡಿಲ್ಲ. ಜೀವವೈವಿಧ್ಯತೆಗಳನ್ನು ದಾಖಲಿಸಿಕೊಳ್ಳುವ ಕಾರ್ಯ ನಮ್ಮ ದೇಶದಲ್ಲಿ ನಡೆಯುತ್ತಿದೆ. ವಿದ್ಯಾರ್ಥಿಗಳ ಮೂಲಕ ಜೀವವಿಧ್ಯತೆಗಳನ್ನು ದಾಖಲಿಸಿಕೊಳ್ಳುವ ಕಾರ್ಯ ನಡೆಯುತ್ತಿರುವುದು ಜಗತ್ತಿನಲ್ಲೆ ಪ್ರಥಮ ಕೆಲಸವಾಗಿದೆ

ಗ್ರಾಮಗಳಲ್ಲಿರುವ ಜೀವವೈವಿಧ್ಯತೆಯನ್ನು ವಿದ್ಯಾರ್ಥಿಗಳು ದಾಖಲಿಸಿ ವರದಿ ತಯಾರಿಸುವುದರಿಂದ ಈ ಜಿಲ್ಲೆಯನ್ನು ಅಭಿವೃದ್ಧಿಪಡಿಸಲು ಸಾಧ್ಯ ಎಂಬುದರ ಬಗ್ಗೆ ಸರಕಾರ ಯೋಜನೆಗಳನ್ನು ರೂಪಿಸಲು



ಸಹಾಯವಾಗುತ್ತದೆಯೆಂದು ಉದಪುಡಿ ಅಭಿಪ್ರಾಯಪಟ್ಟರು.

ಪ್ರಾಸ್ತಾವಿಕವಾಗಿ ಮಾತನಾಡಿದ ಪರಿಸರ ವಿಜ್ಞಾನ ಸಂಸ್ಥೆಯ, ಕುಮಟಾ ಕೇಂದ್ರದ ಮುಖ್ಯಸ್ಥ ಡಾ ಎಂ ಡಿ ಸುಭಾಸಚಂದ್ರನ್ ಜಿಲ್ಲೆಯ ಧಾರಣಾ ಸಾಮರ್ಥ್ಯ ಯಾವ ಮಟ್ಟದಲ್ಲಿದೆ ಎಂಬುದನ್ನು ಸೂಚಿಸುವುದಕ್ಕಾಗಿ ಜಿಲ್ಲೆಯ ಪ್ರತಿಯೊಂದು ಗ್ರಾಮಗಳಲ್ಲಿನ ಜೀವವೈವಿಧ್ಯತೆಗಳನ್ನು ದಾಖಲಿಸುವ ಕಾರ್ಯವನ್ನು ನಡೆಸಿ ಆದರ ಮೂಲಕ ಸರಕಾರಕ್ಕೆ ವರದಿಯನ್ನು ತಯಾರಿಸಿ ಕೊಡಬೇಕಾಗಿದೆ. ತನ್ಮೂಲಕ ಸರಕಾರ ಜಿಲ್ಲೆಯ ಅಭಿವೃದ್ಧಿಪಡಿಸುವುದಕ್ಕಾಗಿ ಯಾವ ಯೋಜನೆಗಳನ್ನು ಕಾರ್ಯರೂಪಗೊಳಿಸಬಹುದು ಎನ್ನುವುದರ ಮೇಲೆ ತಿರ್ಮಾನ ಸಾಧ್ಯ ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಾಳಾಗಿ ಭಾಗವಹಿಸಿದ ಸಸ್ಯತಜ್ಞ ಜಿ ಆರ್ ರಾವ್ ಸವಿಸ್ತಾರವಾಗಿ ವಿವರಿಸಿದರು. ಡಾ ಪ್ರಕಾಶ ಮೇಸ್ತ ಸ್ವಾಗತಿಸಿದ್ದರು. ಸಸ್ಯತಜ್ಞ ಜಿ ಆರ್ ರಾವ್, ಕೀಟತಜ್ಞ ಬಾಲಚಂದ್ರ, ಅರಣ್ಯಸಸ್ಯಗಳ ವಿಶಿಷ್ಟ ಜ್ಞಾನ ಹೊಂದಿರುವ ವಿಷ್ಣು ಡಿ ಮುಕ್ರಿ, ಪಕ್ಷಿ ಹಾಗೂ ಮೃಧ್ವಂಗಿಗಳ ಅಭ್ಯಾಸ ನಡೆಸುತ್ತಿರುವ ಶ್ರೀಕಾಂತ ನಾಯ್ಕ ಹಾಗೂ ಭೂಮಿನಾಥನ್ ವಿಷಯ ತಜ್ಞರಾಗಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ವಿದ್ಯಾರ್ಥಿ- ವಿದ್ಯಾರ್ಥಿನಿಯವರು ಜೀವವೈವಿಧ್ಯತೆ ಯ ವೈಜ್ಞಾನಿಕ ವರದಿಗಳನ್ನು ಮಂಡಿಸಿದರು.

ಕರಾವಳಿ ಮುಂಜಾವು - 30-11-2011

# ಗ್ರಾಮದ ಜೀವವೈವಿಧ್ಯತೆ ಕುರಿತು ಸ್ಪರ್ಧಾ ಕಾರ್ಯಕ್ರಮ

ಕುಮಟಾ: ಭಾರತೀಂಶು ವಿಜ್ಞಾನ ಸಂಸ್ಥೆ ಬೆಂಗಳೂರುರವರ ಜೀವ ಪರಿಸರ ವಿಜ್ಞಾನ ಕೇಂದ್ರವು ಆಯೋಜಿಸಿದ "ನಮ್ಮ ಗ್ರಾಮದ ಜೀವವೈವಿಧ್ಯತೆ" ಎಂಬ ವಿಷಯದ ಕುರಿತು ಉತ್ತರ ಕನ್ನಡದ ಕಾರವಾರ ಶೈಕ್ಷಣಿಕ ಜಿಲ್ಲೆಯ ಪ್ರೌಡಶಾಲಾ ವಿದ್ಯಾರ್ಥಿಗಳಿಗೆ ಸ್ಪರ್ಧಾ ಕಾರ್ಯಕ್ರಮವು ಹೋಟೆಲ್ ವೈಭವ ಪ್ಯಾಲೇಸ್‌ನ ಸಭಾಂಗಣದಲ್ಲಿ ನಡೆಯಿತು.

ಅರಣ್ಯ ಇಲಾಖೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಕೃಷ್ಣಾ. ಡಿ. ಉದುಪುಡಿ ಮಾತನಾಡಿ, ಸ್ವಚ್ಛ ಹಾಗೂ ಉತ್ತಮವಾದ ಪರಿಸರವನ್ನು ಹೊಂದಿದ ದೇಶವು ಮುಂದಿನ ದಿನಗಳಲ್ಲಿ ಜಗತ್ತಿನಲ್ಲಿಯೇ ಒಂದು ಶ್ರೀಮಂತ ದೇಶವಾಗಲಿದೆ. ನಮ್ಮ ದೇಶದ ಗ್ರಾಮಗಳಲ್ಲಿರುವ ಜೀವವೈವಿಧ್ಯತೆಯು ಜಗತ್ತಿನ ಯಾವ ದೇಶದಲ್ಲಿಯೂ ಇಲ್ಲ. ಆದರೆ ಅದನ್ನು ನಾವು ದಾಖಲಿಸಬೇಕಾಗಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಂದ ನಡೆದಿರುವ ಕಾರ್ಯ ಶ್ಲಾಘನೀಯ ಎಂದರು.

ಜಿಲ್ಲೆಯಲ್ಲಿರುವ ಪ್ರತಿಯೊಂದು ಗ್ರಾಮದ ಜೀವವೈವಿಧ್ಯತೆಯನ್ನು




ವಿದ್ಯಾರ್ಥಿಗಳು ದಾಖಲಿಸಿ ವರದಿ ತಯಾರಿಸುವುದರಿಂದ ಈ ಜಿಲ್ಲೆಯನ್ನು ಯಾವ ರೀತಿಯಲ್ಲಿ ಅಭಿವೃದ್ಧಿಪಡಿಸಲು ಸಾಧ್ಯ ಎಂಬುದರ ಕುರಿತು ಸರಕಾರದಲ್ಲಿ ಯೋಜನೆಗಳನ್ನು ರೂಪಿಸಲು ಸಹಾಯವಾಗುತ್ತದೆ ಎಂದರು.

ಪರಿಸರ ವಿಜ್ಞಾನ ಸಂಸ್ಥೆಯ ಕುಮಟಾ ಕೇಂದ್ರದ ಮುಖ್ಯಸ್ಥ ಡಾ. ಎಂ.ಡಿ.ಸುಭಾಸಚಂದ್ರನ್ ಮಾತನಾಡಿ, ಉತ್ತರ ಕನ್ನಡ ಜಿಲ್ಲೆಯ ಧಾರಣಾ ಸಾಮರ್ಥ್ಯ ಯಾವ ಮಟ್ಟದಲ್ಲಿದೆ ಎಂಬುದನ್ನು ಸೂಚಿಸುವು ದಕ್ಕಾಗಿ ಜಿಲ್ಲೆಯ ಪ್ರತಿಯೊಂದು ಗ್ರಾಮಗಳಲ್ಲಿನ ಜೀವವೈವಿಧ್ಯತೆಗಳನ್ನು ದಾಖಲಿಸುವ ಕಾರ್ಯವನ್ನು ನಡೆಸಿ ದ್ದೇವೆ. ಈ ಬಗ್ಗೆ ಸರಕಾರಕ್ಕೆ ವರದಿ ಯನ್ನು ತಯಾರಿಸಿ ಸಲ್ಲಿಸಲಿದ್ದು, ಈ ವರಿದಿಯನ್ವಯ ಸರಕಾರಕ್ಕೆ ಈ ಜಿಲ್ಲೆಯನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಯೋಜನೆಗಳನ್ನು ರೂಪಿಸಲಿದೆ ಎಂದರು.

ಸಸ್ಯತಜ್ಞ ಜಿ.ಆರ್.ರಾವ್ ಮಾತನಾಡಿ, ನಮ್ಮ ಸುತ್ತಮುತ್ತಲಿನ ಜೀವವೈವಿಧ್ಯತೆಯನ್ನು ದಾಖಲಿಸುವ ಮೂಲಕ ಇಲ್ಲಿಯ ವೈವಿಧ್ಯತೆಯನ್ನು ಪರಿಚಯಿಸಬೇಕಿದೆ ಎಂದರು.

ಡಾ.ಪ್ರಕಾಶ ಮೇಸ್ತ ಸ್ವಾಗತಿಸಿದರು. ಸಸ್ಯತಜ್ಞ ಜಿ.ಆರ್.ರಾವ್, ಕೀಟತಜ್ಞ ಬಾಲಚಂದ್ರ, ಅರಣ್ಯಸಸ್ಯಗಳ ವಿಶಿಷ್ಟ ಜ್ಞಾನ ಹೊಂದಿರುವ ವಿಷ್ಣು ಡಿ. ಮುಕ್ರಿ, ಪಕ್ಷಿ ಹಾಗೂ ಮೃದ್ವಂಗಿಗಳ ಅಭ್ಯಾಸ ನಡೆಸುತ್ತಿರುವ ಶ್ರೀಕಾಂತ ನಾಯ್ಕ ಹಾಗೂ ಭೂಮಿನಾಥನ್‌ರವಗಳು ವಿಷಯ ತಜ್ಞರಾಗಿ ಉಪಸ್ಥಿತರಿದ್ದರು.

## ಡಿ. 2: ವನಭೋಜನ

ಅವರ್ಸಾ: ಇಲ್ಲಿಯ ದೈವಜ್ಞ ಬ್ರಾಹ್ಮಣ ಸಮಾಜದ ಶ್ರೀ ಗಜಾನನ ವಿಠೋಬ ದೇವರ ವನಭೋಜನ ಉತ್ಸವವು ಡಿ. 2ರಂದು ನಡೆಯಲಿದೆ. ಡಿ. 5ರಂದು ವಿಶ್ವಕರ್ಮ ಜಯಂತಿ ನೆರವೇರಲಿದೆ.

## ನಿಯಂತ್ರಣ ತಪ್ಪಿದ ಕಾರು ಈರ್ವರಿಗೆ ಗಾಯ

ಶಿರಸಿ: ಶಿರಸಿ-ಬನವಾಸಿ ರಸ್ತೆಯಲ್ಲಿ ಕಾರೊಂದು ನಿಯಂತ್ರಣ ತಪ್ಪಿ ಪಲ್ಟಿಯಾದ ಪರಿಣಾಮ ಈರ್ವರು ಗಾಯಗೊಂಡ ಘಟನೆ ನಡೆದಿದೆ. ನಗರದ ಕಸ್ತೂರಬಾನಗರದ ಫೈಜಲ್ ಮಹಮ್ಮದ್ ಮುಸ್ತಾಕ್ ಹಾಗೂ ಮಹಮ್ಮದ್ ನಾಸಿರ್ ಗಾಯಗೊಂಡಿದ್ದಾರೆ. ಪೋಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

## ನಾಳೆ ಆರೋಗ್ಯ ಶಿಬಿರ

ಶಿರಸಿ: ಇಲ್ಲಿನ ಹರ್ಡೀಕರ್ ಮಂಜಪ್ಪ ಸ್ಮಾರಕ ಭವನದಲ್ಲಿ ಡಿಸೆಂಬರ್ 1ರಂದು ಮುಂಜಾನೆ 11 ಗಂಟೆಗೆ ಸ್ಥಳೀಯ ಕದಂಬ ಚ್ಯಾರಿಟೇಬಲ್ ಫೌಂಡೇಶನ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಮಂಗಳೂರಿನ ದೇರಳಕಟ್ಟೆಯ ಜಸ್ಟೀಸ್ ಕೆ.ಎಸ್.ಹೆಗಡೆ ಚ್ಯಾರಿಟೇಬಲ್

ವಿರುದ್ಧವಾಗಿರುವುದು.

ಕನ್ನಡಪ್ರಭ, 24-11-2011, (P-8)

# ಶಿರಸಿ: ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ಸ್ಪರ್ಧೆ

**ಶಿರಸಿ:** ಉತ್ತರ ಕನ್ನಡ ಜಿಲ್ಲೆಯ ಪ್ರೌಢಶಾಲೆ ಹಾಗೂ ಕಾಲೇಜು ವಿದ್ಯಾರ್ಥಿಗಳಿಗಾಗಿ 'ನಮ್ಮ ಗ್ರಾಮದ ಜೀವವೈವಿಧ್ಯತೆ' ವಿಷಯದ ಕುರಿತು ಜಿಲ್ಲಾ ಮಟ್ಟದ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ, ಜೀವಪರಿಸರ ವಿಜ್ಞಾನ ಕೇಂದ್ರ, ಪಶ್ಚಿಮಘಟ್ಟ ಕಾರ್ಯಪಡೆ ಹಾಗೂ ಕರ್ನಾಟಕ ಜೀವವೈವಿಧ್ಯ ಮಂಡಳಿ ಸಹಯೋಗದೊಂದಿಗೆ ಈ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಉತ್ತಮವಾಗಿ ವೈಜ್ಞಾನಿಕ ವರದಿ ಮಂಡಿಸುವವರಿಗೆ ಶಿರಸಿಯಲ್ಲಿ ನಡೆಯುವ ಉತ್ತರ ಕನ್ನಡ ಜಿಲ್ಲೆಯ ಜೀವವೈವಿಧ್ಯತೆ ಕಾರ್ಯಾಗಾರದಲ್ಲಿ ಯುವ ಸಹ್ಯಾದ್ರಿ ಜೀವವಿಜ್ಞಾನಿ–2011 ಪ್ರಶಸ್ತಿ ನೀಡಲಾಗುವುದು. ಶಾಲಾ–ಕಾಲೇಜು ವಿದ್ಯಾರ್ಥಿಗಳ ಹೆಸರನ್ನು ಆಯಾ ಪ್ರೌಢಶಾಲೆ ಹಾಗೂ ಕಾಲೇಜುಗಳು ಮೂಲಕ ನೋಂದಾಯಿಸಿ ವೈಜ್ಞಾನಿಕ ವರದಿ ಮಂಡಿಸಲು ಪೂರ್ವ ತಯಾರಿ ನಡೆಸಲು ಪ್ರಕಟಣೆ ನಿಡಲಾಗಿತ್ತು. ಇದಕ್ಕೆ ಜಿಲ್ಲೆಯ ವಿವಿಧ ತಾಲೂಕಿನಿ 131 ಗ್ರಾಮಗಳ ಜೀವವೈವಿಧ್ಯತೆಯನ್ನು 50 ಶಾಲಾ,ಕಾಲೇಜುಗಳ 195 ವಿದ್ಯಾರ್ಥಿಗಳು ತಮ್ಮ ಮಾರ್ಗದರ್ಶಕ ಶಿಕ್ಷಕರ ಮೂಲಕ ವರದಿ ಸಲ್ಲಿಸಿದ್ದಾರೆ.

**ಪ್ರಥಮ ಹಂತ 24ರಿಂದ:** ನಮ್ಮ ಗ್ರಾಮದ ಜೀವವೈವಿಧ್ಯತೆ ವರದಿಗಳ ಮಂಡನೆಯ ಪ್ರಥಮ ಹಂತವು ಶಿರಸಿ ಹೋಟೆಲ್ ಮಧುವನ ಸಭಾಂಗಣದಲ್ಲಿ ನ. 24, 25, 26ರ ಬೆಳಗ್ಗೆ 9.30ರಿಂದ 4.30ರ ತನಕ ಹಾಗೂ ಡಿಸೆಂಬರ 2ರಂದು ಶಿರಸಿ, ಮುಂಡಗೋಡ ಸಿದ್ದಾಪುರ, ಯಲ್ಲಾಪುರ ತಾಲೂಕಿನ ಪ್ರೌಢಶಾಲೆ ಹಾಗೂ ಕಾಲೇಜು ವಿದ್ಯಾರ್ಥಿಗಳಿಗಾಗಿ, ಕುಮಟಾದಲ್ಲಿ ಹೋಟೆಲ್ ವೈಭವ ಪ್ಯಾಲೆಸ್ ಸಭಾಂಗಣದಲ್ಲಿ 29, 30ರ ಬಳಗ್ಗೆ 10.00 ರಿಂದ 4.30ರ ತನಕ ಕರಾವಳಿ ತಾಲೂಕಿನ ವಿದ್ಯಾರ್ಥಿಗಳಿಗಾಗಿ ಸಮ್ಮೇಳನ ನಡೆಯಲಿದೆ. ಈ ಸಮ್ಮೇಳದಲ್ಲಿ ಜಿಲ್ಲೆಯ ಪ್ರೌಢಶಾಲೆ ಹಾಗೂ ಕಾಲೇಜು ವಿದ್ಯಾರ್ಥಿಗಳು ತಮ್ಮ ತಮ್ಮ ವೈಜ್ಞಾನಿಕ ವರದಿಗಳನ್ನು ಮಂಡಿಸುತ್ತಾರೆ. ತಮ್ಮ ಗ್ರಾಮಗಳ ಸಸ್ಯ ವೈವಿಧ್ಯತೆಗಳು, ಔಷಧಿ ಸಸ್ಯಗಳು, ಪಾರಂಪರಿಕ ವ್ಯವಸಾಯ, ತೋಟಗಾರಿಕಾ ಬೆಳೆಗಳು, ದೇವರ ಬನಗಳ ಬಗ್ಗೆ ಪರಿಚಯಿಸಲಿದ್ದಾರೆ ಎಂದು ಪಶ್ಚಿಮಘಟ್ಟ ಕಾರ್ಯಪಡೆಯ ಎಂ.ಡಿ. ಸುಭಾಷ ಚಂದ್ರನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# "ನಮ್ಮ ಗ್ರಾಮದ ಜೀವ ವೈವಿಧ್ಯತೆ" ವರದಿ ಸಲ್ಲಿಕೆ

ಕೆನರಾ ವಿಜಯ ಸುದ್ದಿಲೋಕ

ಶಿರಸಿ : ಉತ್ತರ ಕನ್ನಡ ಜಿಲ್ಲೆಯ ಪ್ರೌಢಶಾಲೆ ಹಾಗೂ ಕಾಲೇಜು ವಿದ್ಯಾರ್ಥಿ/ನಿ ಯರಿಗಾಗಿ ಭಾರತೀಯ ವಿಜ್ಞಾನ ಸಂಸ್ಥೆ(Indian Institute of Science)ಬೆಂಗಳೂರುರವರ ಜೀವಪರಿಸರ ವಿಜ್ಞಾನ ಕೇಂದ್ರವು(Centre For Ecological Sciences) ಕರ್ನಾಟಕ ಸರಕಾರದ ಪಶ್ಚಿಮ ಘಟ್ಟ ಕಾರ್ಯಪಡೆ ಹಾಗೂ ಕರ್ನಾಟಕ ಜೀವವೈವಿಧ್ಯ ಮಂಡಳಿಯು(ಏಚಿಡಿಟಚಿಣಚಿಞಚಿ ಃಠಜುತಜಿಢಿಂಣಥಿ ಃಠಚಿಡಿಜ) ಸಹಯೋಗದೊಂದಿಗೆ "ನಮ್ಮ ಗ್ರಾಮದ ಜೀವವೈವಿಧ್ಯತೆ" (My Village Biodiversity)ಎಂಬ ವಿಷಯದ ಬಗ್ಗೆ ಸ್ಪರ್ಧೆಯನ್ನು ಜಿಲ್ಲಾ ಮಟ್ಟದಲ್ಲಿ ಆಯೋಜಿಸಿ, ಉತ್ತಮವಾಗಿ ವೈಜ್ಞಾನಿಕ ವರದಿ ಮಂಡಿಸುವರಿಗೆ ಶಿರಶಿಯಲ್ಲಿ ನೆಡೆಯುವ "ಉತ್ತರ ಕನ್ನಡ ಜಿಲ್ಲೆಯ ಜೀವವೈವಿಧ್ಯತೆ" ಕಾರ್ಯಾಗಾರದಲ್ಲಿ "ಯುವ ಸಹ್ಯಾದ್ರಿ ಜೀವವಿಜ್ಞಾನಿ-2011(Young Sahyadri Ecologist-2011) ಪ್ರಶಸ್ತಿ ನೀಡಲು ಶಾಲಾ-ಕಾಲೇಜು ವಿದ್ಯಾರ್ಥಿಗಳ ಹೆಸರನ್ನು ಆಯಾ ಪ್ರೌಢಶಾಲೆ ಹಾಗೂ ಕಾಲೇಜುಗಳು ಮೂಲಕ ನೊಂದಾಯಿಸಿ ವೈಜ್ಞಾನಿಕ ವರದಿ ಮಂಡಿಸಲು ಪೂರ್ವತಯಾರಿ ನೆಡೆಸಲು ಪ್ರಕಟಣೆ ನೀಡಿತ್ತು. ಇದಕ್ಕೆ ಜಿಲ್ಲೆಯ ವಿವಿಧ ತಾಲೂಕಿನ 131 ಗ್ರಾಮಗಳ ಜೀವವೈವಿಧ್ಯತೆಯನ್ನು 50 ಶಾಲಾ/ಕಾಲೇಜುಗಳ 195 ವಿದ್ಯಾರ್ಥಿ/ನಿಯರು ತಮ್ಮ ಮಾರ್ಗದರ್ಶಕ ಶಿಕ್ಷಕರ ಮೂಲಕ ವರದಿಯನ್ನು ಸಲ್ಲಿಸಿರುತ್ತಾರೆ.

"ನಮ್ಮ ಗ್ರಾಮದ ಜೀವವೈವಿಧ್ಯತೆ" ವರದಿಗಳ ಮಂಡನೆಯ ಪ್ರಥಮ ಹಂತವು ಶಿರಸಿಯ ಹೋಟೆಲ್ ಮಧುವನ ಸಭಾಂಗಣದಲ್ಲಿ ಬೆಳಿಗ್ಗೆ 9.30 ರಿಂದ 4.30 ರ ತನಕ ನವಂಬರ-2011 ತಿಂಗಳ ದಿನಾಂಕ 24, 25, 26 ಹಾಗೂ ಡಿಸೆಂಬರ 02-2011 ರಂದು ಶಿರಶಿ, ಮುಂಡಗೋಡ, ಸಿದ್ದಾಪುರ, ಯಲ್ಲಾಪುರ ತಾಲೂಕಿನ ಪ್ರೌಢಶಾಲೆ ಹಾಗೂ ಕಾಲೇಜು ವಿದ್ಯಾರ್ಥಿ/ನಿಗಾಗಿ ಹಾಗೂ ಕುಮಟಾದ ಹೋಟೆಲ್ ವೈಭವ ಪ್ಯಾಲೆಸ್ ಸಭಾಂಗಣದಲ್ಲಿ ಬೆಳಿಗ್ಗೆ 10.00 ರಿಂದ 4.30 ರ ತನಕ ನವಂಬರ-2011 ತಿಂಗಳ ದಿನಾಂಕ 29, 30 ರಂದು ಕರಾವಳಿ ತಾಲೂಕಿನ ವಿದ್ಯಾರ್ಥಿ/ನಿಗಾಗಿ ಮತ್ತು ಒಂದು ಸಮ್ಮೇಳನವು ಹಳಿಯಾಳ ತಾಲೂಕಿನಲ್ಲೂ ನೆಡೆಯುವದು.

ಈ ಸಮ್ಮೇಳದಲ್ಲಿ ಜಿಲ್ಲೆಯ ಫ್ರೌಡಶಾಲೆ ಹಾಗೂ ಕಾಲೇಜು ವಿದ್ಯಾರ್ಥಿ/ನಿಯರು ತಮ್ಮ ತಮ್ಮ "ನಮ್ಮ ಗ್ರಾಮದ ಜೀವವೈವಿಧ್ಯತೆ" ವೈಜ್ಞಾನಿಕ ವರದಿಗಳನ್ನು ಮಂಡಿಸುತ್ತಾರೆ, ತಮ್ಮ ಗ್ರಾಮಗಳ ಸಸ್ಯ ವೈವಿಧ್ಯತೆಗಳು, ಔಷಧಿ ಸಸ್ಯಗಳು, ಪಾರಂಪರಿಕ ವ್ಯವಸಾಯ/ತೋಟಗಾರಿಕಾ ಬೆಳೆಗಳು ಮತ್ತು ಅವುಗಳ ತಳಿಗಳು, ಬೆಳೆಗಳ ವಿಷೇಶ ಗುಣಗಳು, ಜೈವಿಕ ಕೃಷೀ, ಸಹಕಾರ, ಪ್ರಾಣಿ ವೈವಿಧ್ಯತೆ, ಪಶುಸಂಗೋಪನೆ, ಜೇನು ಸಾಕಾಣಿಕೆ, ಸ್ಥಳಿಯ ಜನರ ಜ್ಞಾನ ವೈವಿಧ್ಯತೆ, ಮೀನುಗಾರಿಕೆ, ಗ್ರಾಮದ ದೇವರಕಾಡು/ದೇವರಬನಗಳ ಬಗ್ಗೆ ಪರಿಚಯಿಸುತ್ತಾರೆ.

ಕೆನರಾ ವಿಜಯ - 30-11-2011

# ವಿದ್ಯಾರ್ಥಿಗಳಿಂದ "ನಮ್ಮ ಗ್ರಾಮದ ಜೀವವೈವಿಧ್ಯತೆ" ವರದಿಗಳ ಮಂಡನೆ

ಕೆನರಾ ವಿಜಯ ಸುದ್ದಿಲೋಕ



**ಕುಮಟಾ** : ಪ್ರೌಢಶಾಲೆ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗಾಗಿ ಭಾರತೀಯ ವಿಜ್ಞಾನ ಸಂಸ್ಥೆ ಬೆಂಗಳೂರು, ಜೀವಪರಿಸರ ವಿಜ್ಞಾನ ಕೇಂದ್ರ ಆಯೋಜಿಸಿದ "ನಮ್ಮ ಗ್ರಾಮದ ಜೀವವೈವಿಧ್ಯತೆ" ಕಾರ್ಯಕ್ರಮವನ್ನು ಮಂಗಳವಾರ ವೈಭವ ಹೋಟೇಲ್‌ನಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಕೃಷ್ಣಾ ಡಿ. ಉದುಪುಡಿ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಸುಂದರ ಪರಿಸರ ಹಾಗೂ ಸ್ವಚ್ಛತೆಯಿಂದ ಕೂಡಿರುವ ಪ್ರದೇಶಗಳು ಶ್ರೀಮಂತ ದೇಶವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಪರಿಸರದಲ್ಲಿರುವ ಜೀವವೈವಿಧ್ಯತೆಗಳನ್ನು ಜಗತ್ತಿನ ಯಾವ ದೇಶವು ಸರಿಯಾಗಿ ದಾಖಲಿಸಿಕೊಂಡಿಲ್ಲ. ಜೀವ ವೈವಿಧ್ಯತೆಗಳನ್ನು ದಾಖಲಿಸಿಕೊಳ್ಳುವ ಕಾರ್ಯ ನಮ್ಮ ದೇಶದಲ್ಲಿ ನಡೆಯುತ್ತಿದೆ. ವಿದ್ಯಾರ್ಥಿಗಳ ಮೂಲಕ ಜೀವವಿಧ್ಯತೆಗಳನ್ನು ದಾಖಲಿಸಿಕೊಳ್ಳುವ ಕಾರ್ಯ ನಡೆಯುತ್ತಿರುವುದು ಜಗತ್ತಿನಲ್ಲೆ ಪ್ರಥಮ ಕೆಲಸವಾಗಿದೆ.

ಗ್ರಾಮಗಳಲ್ಲಿರುವ ಜೀವ ವೈವಿಧ್ಯತೆಯನ್ನು ವಿದ್ಯಾರ್ಥಿಗಳು ದಾಖಲಿಸಿ ವರದಿ ತಯಾರಿಸುವುದರಿಂದ ಈ ಜಿಲ್ಲೆಯನ್ನು ಅಭಿವೃದ್ಧಿ ಪಡಿಸಲು ಸಾಧ್ಯ ಎಂಬುದರ ಬಗ್ಗೆ ಸರಕಾರ ಯೋಜನೆಗಳನ್ನು ರೂಪಿಸಲು ಸಹಾಯವಾಗುತ್ತದೆ ಯೆಂದು ಉದುಪುಡಿ ಅಭಿಪ್ರಾಯ ಪಟ್ಟಿದ್ದಾರೆ.

ಪ್ರಾಸ್ತಾವಿಕವಾಗಿ ಮಾತನಾಡಿದ ಪರಿಸರ ವಿಜ್ಞಾನ ಸಂಸ್ಥೆಯ, ಕುಮಟಾ ಕೇಂದ್ರದ ಮುಖ್ಯಸ್ಥ ಡಾ. ಎಂ. ಡಿ. ಸುಭಾಸಚಂದ್ರನ್ ಜಿಲ್ಲೆಯ ಧಾರಣಾ ಸಾಮರ್ಥ್ಯ ಯಾವ ಮಟ್ಟದಲ್ಲಿದೆ ಎಂಬುದನ್ನು ಸೂಚಿಸುವುದಕ್ಕಾಗಿ ಜಿಲ್ಲೆಯ ಪ್ರತಿಯೊಂದು ಗ್ರಾಮಗಳಲ್ಲಿನ ಜೀವವೈವಿಧ್ಯತೆಗಳನ್ನು ದಾಖಲಿಸುವ ಕಾರ್ಯವನ್ನು ನಡೆಸಿ ಆದರ ಮೂಲಕ ಸರಕಾರಕ್ಕೆ ವರದಿಯನ್ನು ತಯಾರಿಸಿ ಕೊಡಬೇಕಾಗಿದೆ. ತನ್ಮೂಲಕ ಸರಕಾರ ಜಿಲ್ಲೆಯ ಅಭಿವೃದ್ಧಿ ಪಡಿಸುವುದಕ್ಕಾಗಿ ಯಾವ ಯೋಜನೆಗಳನ್ನು ಕಾರ್ಯರೂಪಗೊಳಿಸಬಹುದು ಎನ್ನುವುದರ ಮೇಲೆ ತಿರ್ಮಾನ ಸಾಧ್ಯ ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸಸ್ಯ ತಜ್ಞ ಜಿ. ಆರ್. ರಾವ್ ಸವಿಸ್ತಾರವಾಗಿ ವಿವರಿಸಿದರು. ಡಾ. ಪ್ರಕಾಶ ಮೇಸ್ತ ಸ್ವಾಗತಿಸಿದರು. ಸಸ್ಯ ತಜ್ಞ ಜಿ. ಆರ್. ರಾವ್, ಕೀಟತಜ್ಞ ಬಾಲಚಂದ್ರ, ಅರಣ್ಯ ಸಸ್ಯಗಳ ವಿಶಿಷ್ಟ ಜ್ಞಾನ ಹೊಂದಿರುವ ವಿಷ್ಣು ಡಿ. ಮುಕ್ರಿ, ಪಕ್ಷಿ ಹಾಗೂ ಮೃದ್ವಂಗಿಗಳ ಅಭ್ಯಾಸ ನಡೆಸುತ್ತಿರುವ ಶ್ರೀಕಾಂತ ನಾಯ್ಕ ಹಾಗೂ ಭೂಮಿನಾಥನ್ ರವಗಳು ವಿಷಯ ತಜ್ಞರಾಗಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ವಿದ್ಯಾರ್ಥಿ-ವಿದ್ಯಾರ್ಥಿನಿಯವರು ಜೀವವೈವಿಧ್ಯತೆಯ ವೈಜ್ಞಾನಿಕ ವರದಿಗಳನ್ನು ಮಂಡಿಸಿದರು.

ಲೋಕಧ್ವನಿ, 25-1-2012, (P2)

## ಧ್ವನಿ ಪ್ರತಿಧ್ವನಿ

# ಪಶ್ಚಿಮ ಘಟ್ಟ ಕಾರ್ಯಪಡೆ ಸ್ಪಷ್ಟೀಕರಣ ನೀಡಲಿ

ಶಿರಸಿಯಲ್ಲಿ ಪಶ್ಚಿಮ ಘಟ್ಟ ಕಾರ್ಯಪಡೆ ಹಾಗೂ ಭಾರತೀಯ ವಿಜ್ಞಾನ ಸಂಸ್ಥೆ ಜೊತೆಗೂಡಿ 2 ದಿನದ ಜೀವ ವಿವಿಧತೆಯ ರಕ್ಷಣೆಗಾಗಿ ಕಾರ್ಯಾಗಾರವನ್ನು ನಡೆಸುತ್ತಿದೆ. ಇದು ಒಂದು ಒಳ್ಳೆಯ ಉದ್ದೇಶವನ್ನು ಹೊಂದಿರುವ ಕಾರ್ಯಕ್ರಮ

ಈ ಕೆಲಸದಲ್ಲಿ ತೊಡಗಿಕೊಂಡಿರುವ ಭಾರತೀಯ ವಿಜ್ಞಾನ ಸಂಸ್ಥೆಯು ಜೀವ ವಿವಿಧತೆಯನ್ನು ನಾಶಪಡಿಸುತ್ತಿರುವ ಬಹುರಾಷ್ಟ್ರೀಯ ಕಂಪನಿಯಾದ ಸಿನ್‌ಜೆಂಟಾ ಹಾಗೂ ಅರ್ಥವಾಚ್ (EARTHWATCH) ಜೊತೆಗೂಡಿ ಶಿರಸಿ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕೆಲಸ ಮಾಡಿದ್ದು ಹಲವಾರು ಸಂಶಯಗಳಿಗೆ ಎಡೆಮಾಡಿಕೊಟ್ಟಿದೆ.

ಜೀವ ವಿವಿಧತೆಯ ಕಾರ್ಯಾಗಾರವನ್ನು ಸಂಘಟಿಸುತ್ತಿರುವ ಭಾರತೀಯ ವಿಜ್ಞಾನ ಸಂಸ್ಥೆ ಹಾಗೂ ಸಹಭಾಗಿ ಸಂಸ್ಥೆಯಾದ ಪಶ್ಚಿಮ ಘಟ್ಟ ಕಾರ್ಯಪಡೆಯು ಈ ಕೆಳಗಿನ ಪ್ರಶ್ನೆಗಳಿಗೆ ಸ್ಪಷ್ಟೀಕರಣ ನೀಡಿ ಜನರ ಮನಸ್ಸಿನಲ್ಲಿರುವ ಸಂಶಯವನ್ನು ನಿವಾರಣೆ ಮಾಡಬೇಕೆಂದು ವಿನಂತಿ.

ಒಂದೆಡೆ ಶಾಲೆಗಳಲ್ಲಿ ಜೀವ ವಿವಿಧತೆ ದಾಖಲಾತಿ ಮಾಡುತ್ತಿರುವ ನೀವು ಇನ್ನೊಂದೆಡೆ ಜಾಗತಿಕ ಹಾಗೂ ಭಾರತದ ಕೃಷಿಯಲ್ಲಿನ ಬೀಜದ ವಿವಿಧತೆಯನ್ನು ನಾಶಪಡಿಸುತ್ತಿರುವ, ಕುಲಾಂತರಿ ಭತ್ತವನ್ನು ಪಶ್ಚಿಮ ಘಟ್ಟದಲ್ಲಿ ತರಲು ಪ್ರಯತ್ನಿಸುವ ಸಿನ್‌ಜೆಂಟಾ ಕಂಪನಿ ಜೊತೆ ಸೇರಿಕೊಂಡು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಸರಿಯೇ?

ಆಹಾರ ಸುರಕ್ಷತೆಯ ಕಾರ್ಯಕ್ರಮಕ್ಕೆ ಸಿನ್‌ಜೆಂಟಾ ಕಂಪನಿಯ ಪ್ರತಿನಿಧಿಗಳು, ಅಮೇರಿಕಾದಿಂದ ಬಂದ ವಿದ್ಯಾರ್ಥಿಗಳು ನಮ್ಮ ಹಳ್ಳಿಗಳಲ್ಲಿರುವ ಜನರ ಅಡುಗೆಮನೆಗೆ ಪ್ರವೇಶಿಸಿ ಅವರೇನು ಉಣ್ಣುತ್ತಾರೆ ಎಂದು ಪರೀಕ್ಷಿಸಲು ಅನುವು ಮಾಡಿಕೊಟ್ಟಿದೆ. ಇದೇ ಸಂಸ್ಥೆ ಭಾರತೀಯರಿಗೆ ಅಮೇರಿಕಾದಲ್ಲಿನ ಜನರ ಅಡುಗೆಮನೆ ಪ್ರವೇಶಿಸಿ, ಅವರು ಹೇಗೆ ಬಹುರಾಷ್ಟ್ರೀಯ ಕಂಪನಿಗಳು ತಯಾರಿಸಿದ ಕುಲಾಂತರಿ ಆಹಾರ ಪದಾರ್ಥಗಳನ್ನು ತಿನ್ನುತ್ತಿದ್ದಾರೆ ಎಂಬುದನ್ನು ಪರೀಕ್ಷಿಸಲು ಅವಕಾಶ ಮಾಡಿಕೊಡವರೆ? ಅಥವಾ ಜಾಗತಿಕ ಮಟ್ಟದಲ್ಲಿ ಕುಲಾಂತರಿ ತಳಿಗಳನ್ನು ಪ್ರತಿಷ್ಠಾಪಿಸಲು ಹೇಗೆ ಸಹಾಯಕವಾಗಿದೆ ಎಂಬುದನ್ನು ಹೇಳುವರೆ?

ಜೀವವಿವಿಧತೆಗೆ ತವರಾಗಿರುವ ಉತ್ತರಕನ್ನಡದ ಜನರ ಜೀವನ ಪದ್ಧತಿಯನ್ನೇ ಅರಿಯದ, ಅನುಸರಿಸದ ಇಂತಹ ಜನರಿಗಾಗಿ ಏರ್ಪಡಿಸುವ ಕಾರ್ಯಕ್ರಮಗಳು ಜನವಿರೋಧಿ, ಸ್ವಾರ್ಥ ಸಾಧನೆ, ಜೀವ ವಿವಿಧತೆ ನಾಶಪಡಿಸುವ ಉದ್ದೇಶ ಹೊಂದಿದ್ದು, ಇದನ್ನು ಬೆಂಬಲಿಸುವ ಸರಕಾರದ ಅಂಗವಾದ ಪಶ್ಚಿಮ ಘಟ್ಟ ಕಾರ್ಯಪಡೆಯು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿರುವದರಿಂದ ಅವರೂ ಸಹ ಇದಕ್ಕೆ ನೇರವಾಗಿ ಬೆಂಬಲ ನೀಡುತ್ತಿರುವದು ಸರಿಯೇ?

ಪಶ್ಚಿಮ ಘಟ್ಟದ ರಕ್ಷಣೆಯ ಜವಾಬ್ದಾರಿ ಹೊತ್ತ ಕಾರ್ಯಪಡೆ ಜೀವ ವಿವಿಧತೆಯನ್ನು ನಾಶ ಪಡಿಸುತ್ತಿರುವ ಸಿನ್‌ಜೆಂಟಾ ಕಂಪನಿಯನ್ನು ಬೆಂಬಲಿಸುವ (ಅರ್ಥವಾಚ್) ಸಂಸ್ಥೆಯ ಜೊತೆ ಕೈ ಜೋಡಿಸಿದೆ. ಈ ರೀತಿ ಜೀವ ವಿವಿಧತೆಯನ್ನು ರಕ್ಷಿಸುವ ಹೆಸರಿನ ಅಡಿಯಲ್ಲಿ ಅದರ ನಾಶವನ್ನು ಮಾಡುವ ಹುನ್ನಾರ ಇದಾಗಿದೆಯೆ?

ಪಶ್ಚಿಮ ಘಟ್ಟ ಕಾರ್ಯಪಡೆಯು ಸರಕಾರದ ಅಂಗಸಂಸ್ಥೆಯಾಗಿದ್ದು ಬಹುರಾಷ್ಟ್ರೀಯ ಕಂಪನಿಗಳ ಎಜೆಂಟರ ಹಾಗೆ ಕೆಲಸ ಮಾಡುತ್ತಿರುವದು ಸರಿಯೆ?

ಜೀವ ವಿವಿಧತೆಯ ರಕ್ಷಣೆಯ ಮಂತ್ರವನ್ನು ಪಠಿಸುತ್ತಾ ಇನ್ನೊಂದೆಡೆ ಇದನ್ನು ನಾಶಪಡಿಸುವ ಶಕ್ತಿಗಳ ಜೊತೆ ಕೈ ಜೋಡಿಸುತ್ತಿರುವದು ಜನಸಾಮಾನ್ಯರ ಕಣ್ಣಿಗೆ ಮಣ್ಣೆರಚುವ ತಂತ್ರವಾಗಿದೆ.

ಈ ಬಗ್ಗೆ ಜನರು, ಮಾಧ್ಯಮದವರು ಜಾಗೃತರಾಗಿ, ಪರಿಸರ ಹಾಗೂ ಜೀವ ವಿವಿಧತೆಯ ಹೆಸರಿನಡಿ ಅದನ್ನು ನಾಶಪಡಿಸ ಹೊರಟ ಶಕ್ತಿಗಳ ವಿರುದ್ಧ ಧ್ವನಿ ಎತ್ತಬೇಕಾಗಿರುವದು ಅನಿವಾರ್ಯವಾಗಿದೆ.

–ಪಾಂಡುರಂಗ ಹೆಗಡೆ
ಪರಿಸರ ಸಂರಕ್ಷಣಾ ಕೇಂದ್ರ,ಶಿರಸಿ

ಲೋಕಧ್ವನಿ, -25-11-2011, (P4)

# 'ನಮ್ಮ ಗ್ರಾಮದ ವೈವಿಧ್ಯತೆ' ಸ್ಪರ್ಧಾ ಕಾರ್ಯಕ್ರಮಕ್ಕೆ ಚಾಲನೆ



ಶಿರಸಿ, ನ.24: ಉತ್ತರ ಕನ್ನಡ ಜಿಲ್ಲೆಯ ಪ್ರೌಢಶಾಲೆ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗಾಗಿ ಭಾರತೀಯ ವಿಜ್ಞಾನ ಸಂಸ್ಥೆ **(Indian Institute of Science)** ಬೆಂಗಳೂರುರವರ ಜೀವಪರಿಸರ ವಿಜ್ಞಾನ ಕೇಂದ್ರವು **(Centre For Ecological Sciences)** ಆಯೋಜಿಸಿದ "ನಮ್ಮ ಗ್ರಾಮದ ಜೀವವೈವಿಧ್ಯತೆ" ***(My Village Biodiversity)*** ಸ್ಪರ್ಧೆಯ ಉದ್ಘಾಟನಾ ಸಮಾರಂಭವು ಇಂದು ಶಿರಸಿಯ ಹೋಟೆಲ್ ಮಧುವನ ಸಭಾಂಗಣದಲ್ಲಿ ನಡೆಯಿತು.

ಮುಖ್ಯ ಅತಿಥಿಯಾಗಿ ಶಿರಸಿ ವಿಭಾಗದ ಅರಣ್ಯ ಸಂರಕ್ಷಣಾಧಿಕಾರಿ ಯತೀಶಕುಮಾರ ಅವರು ಪಾಲ್ಗೊಂಡು ಸ್ಪರ್ಧಾರ್ಥಿಗಳನ್ನು ಉದ್ದೇಶಿಸಿ ಪರಿಸರ ವೀಕ್ಷಣೆ ಹಾಗೂ ಗ್ರಹಿಕೆಯ ಮಹತ್ವವನ್ನು ತಿಳಿಸಿದರು.

ಭಾರತೀಯ ವಿಜ್ಞಾನ ಸಂಸ್ಥೆಯ ಹಿರಿಯ ವಿಜ್ಞಾನಿ ಡಾ.ಟಿ.ವಿ ರಾಮಚಂದ್ರ ಅವರು ಮಾತನಾಡಿ, ಗ್ರಾಮದ ಜೀವ ವೈವಿಧ್ಯತೆಯ ಅಭ್ಯಾಸದ ಮಹತ್ವವನ್ನು ತಿಳಿಸಿದರು.

ಕುಮಟಾದ ಪರಿಸರ ವಿಜ್ಞಾನ ಕೇಂದ್ರದ ಡಾ. ಎಂ.ಡಿ.ಸುಭಾಸ ಚಂದ್ರನ್, ಡಾ.ಪ್ರಕಾಶ ಮೇಸ್ತ, ಹೊನ್ನಾವರ ರವರು ವಿಷಯ ತಜ್ಞರಾಗಿ ಆಗಮಿಸಿದ್ದರು.

ವಿದ್ಯಾರ್ಥಿ-ವಿದ್ಯಾರ್ಥಿನಿಯರು "ನಮ್ಮ ಗ್ರಾಮದ ಜೀವವೈವಿಧ್ಯತೆ" ವೈಜ್ಞಾನಿಕ ವರದಿಗಳನ್ನು ಮಂಡಿಸಿದರು.

## ಕಾರು ಡಿಕ್ಕಿ:ಪಾದಚಾರಿಗೆ ಪೆಟ್ಟು

Chawalar added. granted ₹6 lakh for the reno-

The New Indian Express - 25-11-2011, (P3)

# Students Present Bio-diversity Reports

Express News Service

Sirsi: A three-day students' conference on 'Grama Jeeva Vaividhya' (bio-diversity of my village) commenced under the auspices of the Centre for Ecological Science of the Indian Institute of Science, Bangalore, under the guidance of scientist Dr TV Ramachandran here on Thursday.

Students of 45 educational institutions from as many as 114 villages of the Uttara Kannada district submitted their documentation of bio-diversity in their villages at the conference.

Students from Sirsi, Siddapur and Mundgod taluks include those who presented their reports. Students from Yellapur taluk will make their study presentations on December 2.

Similar programme for the students of the coastal taluks will be organised at Kumta on November 29 and 30.

The presentation of documentation by the students will include topics such as crop varieties, organic farming, medicinal plants, forests and wild life, water resources, sacred groves, dairies, fodder resources and cooperative institutions among others, stated a release issued here on Thursday.

Chawalar added.

granted ₹6 lakh for the reno-

The New Indian Express - 25-11-2011, (P3)

# Students Present Bio-diversity Reports

**Express News Service**

**Sirsi:** A three-day students' conference on 'Grama Jeeva Vaividhya' (bio-diversity of my village) commenced under the auspices of the Centre for Ecological Science of the Indian Institute of Science, Bangalore, under the guidance of scientist Dr TV Ramachandran here on Thursday.

Students of 45 educational institutions from as many as 114 villages of the Uttara Kannada district submitted their documentation of bio-diversity in their villages at the conference.

Students from Sirsi, Siddapur and Mundgod taluks include those who presented their reports. Students from Yellapur taluk will make their study presentations on December 2.

Similar programme for the students of the coastal taluks will be organised at Kumta on November 29 and 30.

The presentation of documentation by the students will include topics such as crop varieties, organic farming, medicinal plants, forests and wild life, water resources, sacred groves, dairies, fodder resources and cooperative institutions among others, stated a release issued here on Thursday.

# 'ಜೀವ ವೈವಿಧ್ಯದಲ್ಲಿ ಭಾರತ ಶ್ರೀಮಂತ'

ಕುಮಟಾ: 'ಜಗತ್ತಿನ ಉಳಿದ ದೇಶಗಳು ತಂತ್ರಜ್ಞಾನ, ಮಾನವ ಸಂಪನ್ಮೂಲ ಹಾಗೂ ಆರ್ಥಿಕತೆಯಲ್ಲಿ ಎಷ್ಟೇ ಶ್ರೀಮಂತವಾಗಿದ್ದರೂ ಜೀವ ವೈವಿಧ್ಯ ಶ್ರೀಮಂತಿಕೆಯಲ್ಲಿ ಭಾರತವನ್ನು ಮೀರಲು ಸಾಧ್ಯವಿಲ್ಲ' ಎಂದು ಉಪ ಅರಣ್ಯ ಸಂಸರಕ್ಷಣಾಧಿಕಾರಿ ಕೃಷ್ಣ ಉದಪುಡಿ ತಿಳಿಸಿದರು.

ಕುಮಟಾದಲ್ಲಿ ಪರಿಸರ ವಿಜ್ಞಾನ ಕೇಂದ್ರ, ಕರ್ನಾಟಕ ಜೀವ ವೈವಿಧ್ಯ ಮಂಡಳಿ ಹಾಗೂ ಪಶ್ಚಿಮ ಘಟ್ಟ ಕಾರ್ಯಪಡೆ ವತಿಯಿಂದ ಮಂಗಳವಾರ ನಡೆದ ಜಿಲ್ಲಾ ಮಟ್ಟದ ಪ್ರೌಢಶಾಲಾ ವಿದ್ಯಾರ್ಥಿಗಳ ' ನಮ್ಮ ಗ್ರಾಮ ವೈವಿಧ್ಯ' ಸ್ಪರ್ಧೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಜೀವ ವೈವಿಧ್ಯ ನೀತಿಯಡಿ ವಿದ್ಯಾರ್ಥಿಗಳು ತಮ್ಮ ಗ್ರಾಮ ವೈವಿಧ್ಯಗಳ ಬಗ್ಗೆ ತಯಾರಿಸಿದ ವರದಿ ಬಹಳ ಅಪರೂಪದ್ದು'. ಎಂದರು.

ಭಾರತೀಯ ವಿಜ್ಞಾನ ಸಂಸ್ಥೆಯ ಕುಮಟಾ ಪರಿಸರ ವಿಜ್ಞಾನ ಕೇಂದ್ರದ ಡಾ. ಎಂ.ಡಿ. ಸುಭಾಶ್ಚಂದ್ರ, ' ತಮ್ಮ ಗ್ರಾಮ ವೈವಿಧ್ಯಗಳ ಬಗ್ಗೆ ಕಾರವಾರ ಶೈಕ್ಷಣಿಕ ಜಿಲ್ಲೆಯ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ವರದಿ ತಯಾರಿಸಿ ಮಂಡಿಸುವ ಇಂಥ ಕಾರ್ಯಕ್ರಮ ದೇಶ ದಲ್ಲೇ ಮೊದಲನೆಯದಾಗಿದೆ. ಪರಿಸರ ದೃಷ್ಟಿಯಿಂದ ಭಾರತ ಜಗತ್ತಿನ 12 ರಾಷ್ಟ್ರಗಳಲ್ಲಿ ಒಂದಾಗಿದೆ. ಸರ್ಕಾರ ದ ನೀತಿಯಂತೆ ಗ್ರಾಮಗಳಲ್ಲಿ ಜೀವ ವೈವಿಧ್ಯ ಸಮಿತಿ ರಚಿಸಿದ್ದರೂ ಈ ಬಗ್ಗೆ ಹೆಚ್ಚಿನ ಮಾಹಿತಿಯಿಲ್ಲದ ಸಮಿತಿಗಳಿಂದ ಜೀವ ವೈವಿಧ್ಯ ದಾಖಲಾತಿ ಆಗುತ್ತಿಲ್ಲ' ಎಂದರು.

ಸಸ್ಯ ತಜ್ಞ ಜಿ.ಆರ್.ರಾವ್, ' ನಮ್ಮ ಅಪರೂಪದ ಎಲ್ಲ ಗಿಡ-ಮರಗಳ ಮಾಹಿತಿ ಯನ್ನು ಸಸ್ಯ ಶಾಸ್ತ್ರಜ್ಞರೇ ದಾಖಲಿಸಲು ಸಾಧ್ಯವಿಲ್ಲ. ಅಂತಹ ಕೆಲಸವನ್ನು ವಿದ್ಯಾರ್ಥಿಗಳು ಮಾಡುತ್ತಿ ರುವುದು ವಿಶೇಷ' ಎಂದರು.

ಸ್ಪರ್ಧೆಯ ಮೊದಲ ದಿನ ಕುಮಟಾ, ಅಂಕೋಲಾ ಹಾಗೂ ಕಾರವಾರ ತಾಲ್ಲೂಕಿನ 20 ವಿದ್ಯಾರ್ಥಿಗಳು ಪ್ರಬಂಧ ಮಂಡಿಸಿದರು. ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಟಿ. ನಾಯ್ಕ ಹಾಗೂ ವಿವಿಧ ಶಾಲೆಗಳ ಶಿಕ್ಷಕರು ಪಾಲ್ಗೊಂಡಿದ್ದರು.

ಪ್ರಜಾವಾಣಿ — ೭-೧೨-೨೦೧೧

ಮಡಿಯುಟ್ಟು ಮಹಲಸತಿ ದ್ಯಾವಿಗ ಕೃತಾರ್ಥರಾಗುತ್ತಾರೆ.

ಪ್ರಜಾವಾಣಿ, ೨೫-೧-೨೦೧೨ (P3)

# 'ಜೀವವೈವಿಧ್ಯ ದಾಖಲೀಕರಣ'

ಪ್ರಜಾವಾಣಿ ವಾರ್ತೆ

ಶಿರಸಿ: ಉತ್ತರ ಕನ್ನಡ ಜಿಲ್ಲೆಯ ಪರಿಸರದ ಧಾರಣಾ ಸಾಮರ್ಥ್ಯದ ಅಧ್ಯಯನ ವರದಿ ಮೂರ್‍ನಾಲ್ಕು ತಿಂಗಳುಗಳಲ್ಲಿ ಸಿದ್ಧವಾಗಲಿದೆ. ಜೀವ ವೈವಿಧ್ಯತೆಯ ಸೆಲೆಯಾದ ಉತ್ತರ ಕನ್ನಡ ಜಿಲ್ಲೆಯಲ್ಲಿ ಶಾಲಾ ಮಕ್ಕಳ ಸಹಭಾಗಿತ್ವದೊಂದಿಗೆ ಗ್ರಾಮಗಳ ಜೀವ ವೈವಿಧ್ಯ ದಾಖಲಾತಿ ನಡೆ ಯುತ್ತಿದೆ. ಮುಂದಿನ ಹಂತದಲ್ಲಿ ಸ್ಕ್ಯಾಟ್ಸ್ ಮೂಲಕ ಇನ್ನಷ್ಟು ಅಧ್ಯಯನಕ್ಕೆ ಚಿಂತನೆ ನಡೆದಿದೆ.

ನಗರದ ವಿನಾಯಕ ಸಭಾ ಭವನದಲ್ಲಿ ಸೋಮವಾರದಿಂದ ಮೂರು ದಿನಗಳ ಕಾಲ ಆಯೋಜಿಸಿರುವ 'ನಮ್ಮ ಗ್ರಾಮ ಜೀವವೈವಿಧ್ಯ' ಕುರಿತು ಮಕ್ಕಳು ಸಿದ್ಧಪಡಿಸಿದ ವರದಿ ಮಂಡನೆ ಕಾರ್ಯಕ್ರಮದ ಉದ್ಘಾಟನಾ ಕಾರ್ಯಕ್ರಮದಲ್ಲಿ ಜಿಲ್ಲೆಯ ಧಾರಣಾ ಸಾಮರ್ಥ್ಯ ಅಧ್ಯಯನದ ನೇತೃತ್ವ ವಹಿಸಿರುವ ವಿಜ್ಞಾನಿ ಟಿ.ವಿ. ರಾಮಚಂದ್ರ ಧಾರಣಾ ಸಾಮರ್ಥ್ಯ ಅಧ್ಯಯನದ ವಿವಿಧ ಹಂತಗಳ ಬಗ್ಗೆ ಮಾಹಿತಿ ನೀಡಿದರು.

ಜಿಲ್ಲೆಯ ಕಾಡು, ನದಿ, ನದಿಗುಂಟ ಪ್ರದೇಶದ ವೃಕ್ಷ ವೈವಿಧ್ಯತೆ ಅಧ್ಯಯನ ಮಾಡಲಾಗಿದೆ. ಜಿಲ್ಲೆಯ 312 ಶಿಕ್ಷಣ ಸಂಸ್ಥೆಗಳಿಗೆ ಪರಿಸರ ವಿಜ್ಞಾನ ಕೇಂದ್ರ ಮಕ್ಕಳ ಮೂಲಕ ಜೀವ ವೈವಿಧ್ಯ ಅಧ್ಯಯನ ನಡೆಸುವಂತೆ ಪತ್ರ ಕಳುಹಿಸಿದ್ದು, ಅಂತಿಮವಾಗಿ 150 ಅಧ್ಯಯನಗಳನ್ನು ದಾಖಲೀಕರಿಸಲಾಗಿದೆ. ಈ ಅಧ್ಯಯನ ಮಕ್ಕಳಲ್ಲಿ ಜೀವವೈವಿಧ್ಯ ಅರಿವು ಮೂಡಿಸುವಲ್ಲಿ ಅತ್ಯಂತ ಸಹಕಾರಿಯಾಗಿದೆ ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಪಶ್ಚಿಮಘಟ್ಟ ಕಾರ್ಯಪಡೆ ಅಧ್ಯಕ್ಷ ಅನಂತ ಅಶೀಸರ, ಫೆ.3-4ರಂದು ಪ್ರೌಢಶಾಲಾ ಶಿಕ್ಷಕರಿಗೆ ಜೀವವೈವಿಧ್ಯ ಕುರಿತು ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದರು. ಭತ್ತ ತಳಿ ವೈವಿಧ್ಯ ಕುರಿತು ಕುಮಟಾದಲ್ಲಿ ಶಿಬಿರ ಆಯೋಜಿಸಲಾಗುತ್ತಿದೆ. ಕಾರವಾರ ಕಡವಾಡದ ಗುಡ್ಡ ಕುಸಿತ ಘಟನೆ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಿ ಗುಡ್ಡ ಕುಸಿಯದಂತೆ ರಕ್ಷಣಾ ಕಾರ್ಯ ಯೋಜನೆ ರೂಪಿಸಲಾಗುತ್ತಿದೆ. ಹಳಿಯಾಳ ಭಾಗದ ಪಾರಂಪರಿಕ ಜ್ಞಾನ ಸಂರಕ್ಷಣೆ ಭಾಗವಾಗಿ ದಾಂಡೇಲಿಯಲ್ಲಿ ರಾಜ್ಯ ಮಟ್ಟದ ಶಿಬಿರ ಏರ್ಪಡಿಸಲಾಗುತ್ತಿದೆ. ಜಿಲ್ಲೆ ಯಲ್ಲಿ ಗಣಿಗಾರಿಕೆ ಸಂಪೂರ್ಣ ನಿಷೇಧಿಸಲು ಆಗ್ರಹಿಸಲಾಗಿದೆ ಎಂದರು.

ಪರಿಸರ ವಿಜ್ಞಾನ ಕೇಂದ್ರದ ವಿಜ್ಞಾನಿ ಸುಭಾಶ್ಚಂದ್ರನ್ ಮಾತನಾಡಿ, ಪ್ರತಿ ಗ್ರಾಮದಲ್ಲಿ ರಚಿಸಿರುವ ಜೀವ ವೈವಿಧ್ಯ ನಿರ್ವಹಣಾ ಸಮಿತಿಗಳು ಸ್ಥಳೀಯ ಶಾಲಾ ಮಕ್ಕಳ ಸಹಾಯ ಪಡೆದು ಗ್ರಾಮದ ಜೀವವೈವಿಧ್ಯ ದಾಖಲಿಸಬೇಕು. ಸರ್ಕಾರ ಈ ಕಾರ್ಯಕ್ಕೆ ಶಾಲೆಗಳಿಗೆ ಅನುದಾನ ಒದಗಿಸಬೇಕು ಎಂದರು.

ಕೆನರಾ ವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಎಸ್.ಎನ್. ಶಾಂತ ಕುಮಾರ, ರೋಟರಿ ಕ್ಲಬ್ ಅಧ್ಯಕ್ಷ ಎಂ.ಎಸ್. ಶೆಟ್ಟಿ, ಜಿಲ್ಲಾ ವಿಜ್ಞಾನ ಕೇಂದ್ರದ ಮುಖ್ಯಸ್ಥ ವಿ.ಎನ್. ನಾಯಕ ಉಪಸ್ಥಿತರಿದ್ದರು.

ಸಂಯುಕ್ತ ಕರ್ನಾಟಕ
ಹುಬ್ಬಳ್ಳಿ

ಸಂಯುಕ್ತ ಕರ್ನಾಟಕ - 24-11-2011

## ನಮ್ಮ ಗ್ರಾಮದ ಜೀವವೈವಿಧ್ಯತೆ

# ದಾಖಲಾತಿ ಬಗ್ಗೆ ಮಕ್ಕಳ ಸಮ್ಮೇಳನ

ಕಾರವಾರ, 23– ಉತ್ತರ ಕನ್ನಡ ಜಿಲ್ಲೆಯ ಪ್ರೌಢಶಾಲೆ ಹಾಗೂ ಕಾಲೇಜು ವಿದ್ಯಾರ್ಥಿಗಳಿಗಾಗಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ ಜೀವಪರಿಸರ ವಿಜ್ಞಾನ ಕೇಂದ್ರವು ಕರ್ನಾಟಕ ಸರಕಾರದ ಪಶ್ಚಿಮ ಘಟ್ಟ ಕಾರ್ಯಪಡೆ ಹಾಗೂ ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸಹಯೋಗದೊಂದಿಗೆ "ನಮ್ಮ ಗ್ರಾಮದ ಜೀವವೈವಿಧ್ಯತೆ" ವರದಿಗಳ ಮಂಡನೆಯ ಪ್ರಥಮ ಹಂತ ಕಾರ್ಯಕ್ರಮ ಆಯೋಜಿಸಲಾಗಿದೆ.

ನ. 24, 25, 26 ಹಾಗೂ ಡಿ. 2ರಂದು ಶಿರಸಿಯ ಹೋಟೆಲ್ ಮಧುವನ ಸಭಾಂಗಣದಲ್ಲಿ ಬೆಳಿಗ್ಗೆ 9.30 ರಿಂದ 4.30ರ ತನಕ ಶಿರಶಿ, ಮುಂಡಗೋಡ, ಸಿದ್ದಾಪುರ, ಯಲ್ಲಾಪುರ ತಾಲೂಕಿನ ಪ್ರೌಢಶಾಲೆ ಹಾಗೂ ಕಾಲೇಜು ವಿದ್ಯಾರ್ಥಿಗಳಿಗಾಗಿ ಹಾಗೂ ನ. 29 ಮತ್ತು 30ರಂದು ಕುಮಟಾದ ಹೋಟೆಲ್ ವೈಭವ ಪ್ಯಾಲೆಸ್ ಸಭಾಂಗಣದಲ್ಲಿ ಬೆಳಿಗ್ಗೆ 10 ರಿಂದ 4.30ರ ತನಕ ಕರಾವಳಿ ತಾಲೂಕಿನ ವಿದ್ಯಾರ್ಥಿಗಳಿಗಾಗಿ ಮತ್ತು ಒಂದು ಸಮ್ಮೇಳನವು ಹಳಿಯಾಳ ತಾಲೂಕಿನಲ್ಲಿ ನಡೆಯಲಿದೆ.

ಈ ಸಮ್ಮೇಳದಲ್ಲಿ ಜಿಲ್ಲೆಯ ಪ್ರೌಢಶಾಲೆ ಹಾಗೂ ಕಾಲೇಜು ವಿದ್ಯಾರ್ಥಿಗಳು ತಮ್ಮ ತಮ್ಮ "ನಮ್ಮ ಗ್ರಾಮದ ಜೀವವೈವಿಧ್ಯತೆ" ವೈಜ್ಞಾನಿಕ ವರದಿಗಳನ್ನು ಮಂಡಿಸಲಿದ್ದಾರೆ. ತಮ್ಮ ಗ್ರಾಮಗಳ ಸಸ್ಯ ವೈವಿಧ್ಯತೆಗಳು, ಔಷಧಿ ಸಸ್ಯಗಳು, ಪಾರಂಪರಿಕ ವ್ಯವಸಾಯ/ತೋಟಗಾರಿಕಾ ಬೆಳೆಗಳು ಮತ್ತು ಅವುಗಳ ತಳಿಗಳು, ಬೆಳೆಗಳ ವಿಶೇಷ ಗುಣಗಳು, ಜೈವಿಕ ಕೃಷಿ, ಸಹಕಾರ, ಪ್ರಾಣಿ ವೈವಿಧ್ಯತೆ, ಪಶುಸಂಗೋಪನೆ, ಜೇನು ಸಾಕಾಣಿಕೆ, ಸ್ಥಳಿಯ ಜನರ ಜ್ಞಾನ ವೈವಿಧ್ಯತೆ, ಮೀನುಗಾರಿಕೆ, ಗ್ರಾಮದ ದೇವರಕಾಡು/ದೇವರಬನಗಳ ಬಗ್ಗೆ ಪರಿಚಯಿಸಲಿದ್ದಾರೆ.

ನಮ್ಮ ಗ್ರಾಮದ ಜೀವವೈವಿಧ್ಯತೆ ವಿಷಯಕ್ಕೆ ಸಂಬಂಧಿಸಿದಂತೆ ತಾಲೂಕಿನ 131 ಗ್ರಾಮಗಳ ಜೀವವೈವಿಧ್ಯತೆಯನ್ನು 50 ಶಾಲಾ/ಕಾಲೇಜುಗಳ 195 ವಿದ್ಯಾರ್ಥಿಗಳು ತಮ್ಮ ಮಾರ್ಗದರ್ಶಕ ಶಿಕ್ಷಕರ ಮೂಲಕ ವರದಿ ಸಲ್ಲಿಸಿದ್ದಾರೆ. ಸಮಾವೇಶದಲ್ಲಿ ಉತ್ತಮವಾಗಿ ವೈಜ್ಞಾನಿಕ ವರದಿ ಮಂಡಿಸುವರಿಗೆ ಶಿರಶಿಯಲ್ಲಿ ನೆಡೆಯುವ ವಿಉತ್ತರ ಕನ್ನಡ ಜಿಲ್ಲೆಯ ಜೀವವೈವಿಧ್ಯತೆಹಿ ಕಾರ್ಯಾಗಾರದಲ್ಲಿ ವಿಯುವ ಸಹ್ಯಾದ್ರಿ ಜೀವವಿಜ್ಞಾನಿ–2011 ಪ್ರಶಸ್ತಿ ನೀಡಲಾಗುತ್ತದೆ ಎಂದು ಡಾ. ಎಂ.ಡಿ. ಸುಭಾಷ ಚಂದ್ರನ್ ತಿಳಿಸಿದ್ದಾರೆ.

# ಇಂದು ನಮ್ಮ ಗ್ರಾಮದ ಜೀವ ವೈವಿಧ್ಯ ವರದಿ

ಕಾರವಾರ: ಜಿಲ್ಲೆಯ ಪ್ರೌಢಶಾಲೆ ಹಾಗೂ ಕಾಲೇಜು ವಿದ್ಯಾರ್ಥಿಗಳಿಗಾಗಿ ಭಾರತೀಯ ವಿಜ್ಞಾನ ಸಂಸ್ಥೆಯ ಜೀವ ಪರಿಸರ ವಿಜ್ಞಾನ ಕೇಂದ್ರ, ರಾಜ್ಯ ಸರಕಾರದ ಪಶ್ಚಿಮ ಘಟ್ಟ ಕಾರ್ಯಪಡೆ ಹಾಗೂ ಕರ್ನಾಟಕ ಜೀವ ವೈವಿಧ್ಯ ಮಂಡಳಿ ಸಹಯೋಗದೊಂದಿಗೆ ನಮ್ಮ ಗ್ರಾಮದ ಜೀವ ವೈವಿಧ್ಯತೆ ಎಂಬ ವಿಷಯದ ಬಗ್ಗೆ ಜಿಲ್ಲಾ ಮಟ್ಟದ ಸ್ಪರ್ಧೆ ಆಯೋಜಿಸಲಾಗಿದೆ. ಉತ್ತಮವಾಗಿ ವೈಜ್ಞಾನಿಕ ವರದಿ ಮಂಡಿಸುವವರಿಗೆ ಶಿರಸಿಯಲ್ಲಿ ನಡೆಯಲಿರುವ ಉತ್ತರಕನ್ನಡ ಜಿಲ್ಲೆಯ ಜೀವ ವೈವಿಧ್ಯತೆ ಕಾರ್ಯಾಗಾರದಲ್ಲಿ ಯುವ ಸಹ್ಯಾದ್ರಿ ಜೀವವಿಜ್ಞಾನಿ-2011 ಪ್ರಶಸ್ತಿ ನೀಡಲು ಶಾಲಾ-ಕಾಲೇಜು ವಿದ್ಯಾರ್ಥಿಗಳ ಹೆಸರನ್ನು ಆಯಾ ಪ್ರೌಢಶಾಲೆ ಹಾಗೂ ಕಾಲೇಜುಗಳು ಮೂಲಕ ನೋಂದಾಯಿಸಿ ವೈಜ್ಞಾನಿಕ ವರದಿ ಮಂಡಿಸಲು ಪೂರ್ವ ತಯಾರಿ ನಡೆಸಲು ತಿಳಿಸಲಾಗಿತ್ತು.

ಇದಕ್ಕೆ ಜಿಲ್ಲೆಯ ವಿವಿಧ ತಾಲೂಕಿನ 131 ಗ್ರಾಮಗಳ ಜೀವ ವೈವಿಧ್ಯತೆಯನ್ನು 50 ಶಾಲಾ-ಕಾಲೇಜುಗಳ 195 ವಿದ್ಯಾರ್ಥಿಗಳು ತಮ್ಮ ಮಾರ್ಗದರ್ಶಕ-ಶಿಕ್ಷಕರ ಮೂಲಕ ವರದಿ ಸಲ್ಲಿಸಿದ್ದಾರೆ. ನಮ್ಮ ಗ್ರಾಮದ ಜೀವ ವೈವಿಧ್ಯತೆ ವರದಿಗಳ ಮಂಡನೆಯ ಪ್ರಥಮ ಹಂತ ಶಿರಸಿಯ ಮಧುವನ ಹೊಟೇಲ್‌ನ ಸಭಾಂಗಣದಲ್ಲಿ ನ. 24, 25 ಹಾಗೂ 26ರಂದು ಬೆಳಗ್ಗೆ 9:30ರಿಂದ ಸಂಜೆ 4:30ರ ವರೆಗೆ ನಡೆಯಲಿದೆ.

ನಂತರ ಡಿ. 2ರಂದು ಶಿರಸಿ, ಮುಂಡಗೋಡ, ಸಿದ್ದಾಪುರ, ಯಲ್ಲಾಪುರ ತಾಲೂಕಿನ ಪ್ರೌಢಶಾಲೆ ಹಾಗೂ ಕಾಜೇಜು ವಿದ್ಯಾರ್ಥಿಗಳಿಗಾಗಿ ಕುಮಟಾದ ಹೊಟೇಲ್ ವೈಭವ ಪ್ಯಾಲೆಸ್ ಸಭಾಂಗಣದಲ್ಲಿ ನ. 29 ಹಾಗೂ 30ರಂದು ಬೆಳಗ್ಗೆ 10ರಿಂದ ಪ್ರಾರಂಭವಾಗಲಿದೆ. ಕರಾವಳಿ ತಾಲೂಕಿನ ವಿದ್ಯಾರ್ಥಿಗಳಿಗಾಗಿ ಒಂದು ಸಮ್ಮೇಳನ ಹಳಿಯಾಳದಲ್ಲಿ ನಡೆಯಲಿದೆ.

ಈ ಸಮ್ಮೇಳನದಲ್ಲಿ ಜಿಲ್ಲೆಯ ಪ್ರೌಢಶಾಲೆ ಹಾಗೂ ಕಾಲೇಜು ವಿದ್ಯಾರ್ಥಿಗಳು ತಮ್ಮ ತಮ್ಮ ನಮ್ಮ ಗ್ರಾಮದ ಜೀವ ವೈವಿಧ್ಯತೆಗಳ ಬಗ್ಗೆ ವರದಿಗಳನ್ನು ಈಗಾಗಲೇ ಮಂಡಿಸಿದ್ದಾರೆ. ತಮ್ಮ ಗ್ರಾಮಗಳ ಸಸ್ಯ ವೈವಿಧ್ಯತೆಗಳು, ಔಷಧಿ ಸಸ್ಯಗಳು, ಪಾರಂಪರಿಕ ವ್ಯವಸಾಯ, ತೋಟಗಾರಿಕಾ ಬೆಳೆಗಳು ಮತ್ತು ಅವುಗಳ ತಳಿಗಳು, ಬೆಳಗಳ ವಿಶೇಷ ಗುಣ, ಜೈವಿಕ ಕೃಷಿ, ಸಹಕಾರ, ಪ್ರಾಣಿ ವೈವಿಧ್ಯತೆ, ಪಶುಸಂಗೋಪನೆ ಜೇನು ಸಾಕಾಣಿಕೆ ಸ್ಥಳೀಯ ಜನರ ಜ್ಞಾನ ವೈವಿಧ್ಯತೆ, ಮೀನುಗಾರಿಕೆ, ಗ್ರಾಮದ ದೇವರ ಕಾಡು ಹಾಗೂ ದೇವರ ಬನಗಳ ಬಗ್ಗೆ ಪರಿಚಯಿಸಿದ್ದಾರೆ ಎಂದು ಎಂ. ಸುಭಾಷಚಂದ್ರನ್ ತಿಳಿಸಿದ್ದಾರೆ.

ಉದಯವಾಣಿ, 24-11-2011